# ಹಚ್ಚ ಹಸಿರಿನ ನೀರು ತಾವರೆ...



ಪ್ರಕೃತಿಯಲ್ಲಿ ವಿವಿಧ ರೀತಿಯ ಹೂಗಳು ತಮ್ಮ ವೈವಿಧ್ಯಮಯ ಬಣ್ಣಗಳಿಂದಲೇ ಆಕರ್ಷಕ ರೂಪ ಪಡೆದಿರುತ್ತದೆ. ಹಸಿರು ಗಿಡದ ಮೇಲೆ ಬಿಳಿ, ಹಳದಿ, ಕೆಂಪು... ನಾನಾ ಬಣ್ಣದ ಹೂಗಳು ಕಾಣಸಿಗುತ್ತವೆ. ಆದರೆ ನೀವು ಎಂದಾದರೂ ಹೂವಿನ ಬಣ್ಣವೇ ಹಸಿರಾಗಿರುವುದನ್ನು ನೋಡಿದ್ದೀರಾ? ಹೌದು ಇಲ್ಲೊಂದು ನೀರು ತಾವರೆ ಎಂಬ ಹೂವು ಹಸಿರು ಬಣ್ಣ ಹೊಂದಿದೆ.

ಈ ಹೂವಿನ ಗಿಡದ ವಿಶೇಷವೆಂದರೆ, ಇದರ ಆಸರೆಗೆ ಮಣ್ಣಿನ ಅವಶ್ಯಕತೆ ಇರುವುದಿಲ್ಲ. ಕೇವಲ ನೀರಿನಲ್ಲಿ ಬೆಳೆಯುವ ಹೂವಾಗಿದ್ದು, ಒಮ್ಮೆ ನೀರಿನ ತೊಟ್ಟಿಯಲ್ಲಿ ಈ ಹೂವನ್ನು ಬೆಳೆಸಿದರೆ ವರ್ಷದ ಎಲ್ಲ ಮಾಸದಲ್ಲಿಯೂ ಇದು ನಿಮ್ಮ ಮನೆಯಂಗಳವನ್ನು ಅಲಂಕರಿಸುತ್ತದೆ.

ನೀರಿನಲ್ಲಿಯೇ ಬೆಳೆಯುತ್ತಾ ಬೆಳೆಯುತ್ತಾ, ಸಣ್ಣ ಸಣ್ಣ ಗಿಡಗಳನ್ನು ಬಿಡುತ್ತದೆ. ಎಲೆಯ ಮೇಲೊಂದು ಎಲೆಯನ್ನು ಇಟ್ಟು ಪೋಣಿಸಿದಂತೆ ಕಾಣುವ ಈ ಹೂವು ಹಸಿರುಹಸಿರಾಗಿ ಕಂಗೊಳಿಸುತ್ತದೆ. ಆ ಕಾರಣಕ್ಕೆ ಈ ಹೂವನ್ನು 'ಹಸಿರು ಗುಲಾಬಿ' ಎಂದು ಕೂಡ ಕರೆಯುತ್ತಾರೆ. ಸದಾ ತಾಜಾ ರೂಪ ಹೊಂದಿದ ಈ ನೀರು ತಾವರೆ ನಿಮ್ಮ ಮನೆಯಂಗಳಕ್ಕೆ ಮನಮೋಹಕವಾಗಿ ಕಾಣುತ್ತದೆ.

–ಪ್ರತೀಕ್ಷಾ



# ಡಂಬಳದ 'ಜಪದ ಬಾವಿ'

ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡಂಬಳ ವಿಶಿಷ್ಟ ಐತಿಹಾಸಿಕ ಊರು. ಇಲ್ಲಿ ದೊಡ್ಡಬಸಪ್ಪ ದೇವಾಲಯ ತನ್ನದೇ ಆದ ವಿಶಿಷ್ಟ ವಾಸ್ತು ಶೈಲಿಯಿಂದ ಕಂಗೊಳಿಸುತ್ತಿದೆ. ಹಾಗೆಯೇ ಈ ದೇವಸ್ಥಾನ ದಾಟಿ ಮುಂದೆ ಬಲಕ್ಕೆ ಹೋದರೆ ಹೊಲದ ಮಧ್ಯೆ ಬಾವಿಯೊಂದು ಸಿಗುತ್ತದೆ. ಇದರ ಹೆಸರು ಜಪದ ಬಾವಿ! ಹೆಸರಿಗೆ ತಕ್ಕಂತೆ ಜಪ ಮಾಡಲೆಂದೇ ನಿರ್ಮಾಣವಾದ ಬಾವಿ ಇದು. ಹದಿನೆಂಟು ಚಿಕ್ಕ ಚಿಕ್ಕ ಕೋಣೆಗಳು, ಮಧ್ಯದಲ್ಲೊಂದು ಪುಷ್ಕರಣಿ. ನೋಡಲು ಬಹಳ ಆಕರ್ಷಕ. ಹಿಂದಿನವರು ಜಪ ತಪಕ್ಕೆ ನೀಡಿದ ಮಹತ್ವಕ್ಕೆ ಈ ಬಾವಿ ಒಂದು ಉದಾಹರಣೆ. ಸುಂದರವಾದ ಪುಷ್ಕರಣಿಗಳು ನಮ್ಮಲ್ಲಿ ಸಾಕಷ್ಟಿದ್ದರೂ ಜಪ ಮಾಡಲೆಂದೇ ನಿರ್ಮಿಸಿದ ಈ ಬಾವಿ ಅಪರೂಪದ ರಚನೆ ಎನ್ನಬಹುದು. ಬನ್ನಿ ಒಮ್ಮೆ ನೋಡಿ ಅದ್ಭುತ ಅನುಭವ ಪಡೆಯಿರಿ.

–ವಿರೇಶ ಬಂಗಾರಶೆಟ್ಟರ, ಕುಷ್ಟಗಿ

# ಹೂಗಿಡಕ್ಕೆ ಆಸರೆ ಮಣ್ಣಲ್ಲ, ಪೈಪು!



ಗಿಡವೊಂದು ಗಟ್ಟಿಯಾಗಿ ನೆಲೆಯೂರಲು ಮಣ್ಣು ಅತ್ಯಗತ್ಯ. ಆದರೆ ಇಲ್ಲೊಂದು ಹೂ ಗಿಡವು ಮಣ್ಣು ಬೇಡ, ಪ್ಲಾಸ್ಟಿಕ್ ಪೈಪೇ ಸಾಕೆನಗೆ ಎನ್ನುತ್ತಿದೆ. ಹೂವಿನ ಬೀಜವೊಂದು ಹೇಗೋ ಮನೆಯೊಂದರ ತ್ಯಾಜ್ಯ ನೀರು ಹೊರಹೋಗಲು ಅಳವಡಿಸಿದ ಪ್ಲಾಸ್ಟಿಕ್ ಪೈಪ್‌ನ ಒಳಗೆ ಸೇರಿದೆ.

ಕ್ರಮೇಣ ಸಿಕ್ಕ ಸಣ್ಣ ಪುಟ್ಟ ಕಸ ಕಡ್ಡಿಗಳನ್ನೇ ಆಸರೆಯಾಗಿಸಿಕೊಂಡು ಚಿಗುರೊಡೆದಿದೆ. ಬಳಿಕ ಹೂಗಿಡವು ಸೊಂಪಾಗಿ ಬೆಳೆಯತೊಡಗಿದೆ. ಇದನ್ನು ಕಂಡ ಮನೆ ಮಾಲೀಕರು ಗಿಡವನ್ನು ಹಾಗೆಯೇ ಉಳಿಸಿಕೊಂಡಿದ್ದು, ಸದ್ಯ ಅದು ಹತ್ತಾರು ಹೂಗಳನ್ನು ಬಿಟ್ಟು ನಳನಳಿಸುತ್ತಿದೆ.

ಇನ್ನು ಬೀಜವು ಪೈಪ್ ಒಳಗೆ ಸಿಲುಕಿದರೂ ಛಲ ಬಿಡದೆ ಮೊಳಕೆ ಒಡೆದು ಸಸಿಯಾಗಿ ಹೂ ಅರಳಿಸಿರುವುದು ಮನುಷ್ಯನ ಜೀವನಪ್ರೀತಿಗೂ ಪ್ರೇರಣೆಯಂತಿದೆ. ಬದುಕಿನಲ್ಲಿ ಏನೇ ಕಷ್ಟಗಳು ಎದುರಾದರೂ ಎದೆಗುಂದದೆ ಅವುಗಳನ್ನು ಧೈರ್ಯದಿಂದ ಎದುರಿಸಿ ಮುನ್ನುಗ್ಗಬೇಕು ಎನ್ನುವುದನ್ನು ಈ ಹೂಗಿಡ ಸಾರಿದಂತೆ ಕಾಣುತ್ತಿದೆ. ಈ ಪುಟ್ಟ ಸಸ್ಯಕ್ಕಿರುವ ದೃಢಸಂಕಲ್ಪ, ಬುದ್ಧಿವಂತ ಪ್ರಾಣಿ ಎನಿಸಿಕೊಂಡ ಮನುಷ್ಯನಿಗೇತಕೆ ಬಾರದೋ?

–ಕೆ.ಟಿ.ಜಯಶ್ರೀ, ಹಾಸನ